(4) ಕರ್ನಾಟಕ ಭೂ ಸುಧಾರಣೆ ಮತ್ತು ಇತರ ಕಾನೂನು ತಿದ್ದುಪಡಿ ವಿಧೇಯಕ 2014

ದಿನಾಂಕ:28.07.2014ರಂದು ಅರ್ಕಾವತಿ ಡಿ ನೋಟಿಫಿಕೇಷನ್ ವಿರುದ್ದ ಬಿಡಿಎ ಕಛೇರಿಯ ಬಳಿ ಪ್ರತಿಭಟನೆಯನ್ನು ನಡೆಸುತ್ತಿದ್ದ ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಸದಸ್ಯರಾದ ಶ್ರೀ ಎಸ್.ಆರ್. ವಿಶ್ವನಾಥ್ ಮತ್ತು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಮಾನ್ಯ ಸದಸ್ಯರಾದ ಶ್ರೀ ಎಸ್. ಮುನಿರಾಜು ಇವರುಗಳನ್ನು ಮಧ್ಯಾಹ್ನ 12.00 ಗಂಟೆಗೆ ದಸ್ತಗಿರಿ ಮಾಡಿ ಸದಾಶಿವನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಅವರಿಂದ ವಿವರವನ್ನು ಪಡೆದು K.P. Act ಕಲಂ:71ರ ಪ್ರಕಾರ ಮಧ್ಯಾಹ್ನ 12.30 ಗಂಟೆಗೆ ಬಿಡುಗಡೆ ಮಾಡಲಾಗಿರುತ್ತದೆ ಎಂದು ಶೇಷಾದ್ರಿಪುರಂ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ರವರು ತಿಳಿಸಿರುತ್ತಾರೆಂದು ಈ ಮೂಲಕ ಸದನದ ಗಮನಕ್ಕೆ ತರಲಾಗಿದೆ.

ಅಧ್ಯಕ್ಷರು:– ಈಗ ಶಾಸನ ರಚನೆ, ಈಗ ವಿಧೇಯಕಗಳನ್ನು ಮಂಡಿಸುವುದು.

15. ಶಾಸನ ರಚನೆ

1. ವಿಧೇಯಕಗಳನ್ನು ಮಂಡಿಸುವುದು

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2014

ಅಧ್ಯಕ್ಷರು:– ಇದು ನಿಮಗೆ ಸಂಬಂಧಪಟ್ಟಿರುವುದಾಗಿರುವುದರಿಂದ ನಾನು ಹೇಳುವುದನ್ನು ಕೇಳಿ. 94(ಬಿ) ತಿದ್ದುಪಡಿಯಾಗಿತ್ತಲ್ಲ ಬಗರ್‌ಹುಕುಂ ಮಂಜೂರಾತಿಗೆ ಸಂಬಂಧಿಸಿದಂತೆ 2ನೇ ತಿದ್ದುಪಡಿಯಾಗಿತ್ತಲ್ಲಾ...

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ತಾವು ಕೊನೆಯ ದಿವಸ ಎಲ್ಲಾ ಬಿಲ್ಲುಗಳನ್ನು ತೆಗೆದುಕೊಂಡು ಬಂದು ಪಾಸು ಮಾಡುವಂತಹ ಕ್ರಮ ಸರಿಯಾದುದಲ್ಲ.

(ಗೊಂದಲ)

ಅಧ್ಯಕ್ಷರು:– 14 ವರ್ಷ ಎಂದು ಪಾಯಿದೆ ಇತ್ತು, ಈಗ ಪಾಯಿದೆ ಮುಗಿದಿದೆ. ಈಗ ಎರಡು ವರ್ಷ ಜಾಸ್ತಿ ಮಾಡಿದ್ದಾರೆ. ಇದು pending ಇತ್ತು. 1953–54 ರ applications ಗಳು ಸುಮಾರು 5–6 ಲಕ್ಷ applications ಗಳು ಪೆಂಡಿಂಗ್ ಇವೆ. ಆದ್ದರಿಂದ ಅದರ ಬಗ್ಗೆ ತೀರ್ಮಾನ ಮಾಡಬೇಕಾದರೆ ಅದಕ್ಕೆ ತಿದ್ದುಪಡಿ ಮಾಡಿ extend ಮಾಡಿಕೊಳ್ಳಲೇಬೇಕಾಗುತ್ತದೆ. 16 ವರ್ಷ ಎಂದು ಮಾಡುತ್ತಿದ್ದಾರೆ, ಇದರಿಂದ ಎರಡು ವರ್ಷ ಸಿಗುತ್ತದೆ. ಆದ್ದರಿಂದ ಇದನ್ನು urgent ಆಗಿ ಮಾಡಲೇಬೇಕು. ಇಲ್ಲದಿದ್ದರೆ ಇದು ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಬಿದನ್ನು ಒಂದು ವಾರದ ಮುಂಚೆ ಅಥವಾ 10 ದಿವಸದ ಮುಂಚೆಯೇ ತರಬೇಕಾಗಿತ್ತು.

ಅಧ್ಯಕ್ಷರು:– ಒಂದು ನಿಮಿಷ ತಾಳಿ ನಾನು ಎಲ್ಲವನ್ನು ಹೇಳುತ್ತೇನೆ. ಎರಡು ವಿಷಯವಿದೆ, ಹೇಳುತ್ತೇನೆ. ಬಾಕಿ ಇರುವುದನ್ನು ಆಮೇಲೆ ಮಾಡಿಕೊಳ್ಳೋಣ. ಮಾನ್ಯ ಶ್ರೀನಿವಾಸ ಪ್ರಸಾದ್, ಕಂದಾಯ ಸಚಿವರೆ, ವಿಧೇಯಕವನ್ನು ಮಂಡಿಸಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕ 2014.

(ಬಿಜೆಪಿ ಸದಸ್ಯರು ಸದನದ ಬಾವಿಯಲ್ಲಿ ಸರ್ಕಾರದ ವಿರುದ್ದದ ಸಿಬಿಐ ತನಿಖೆ ಆಗಲೇಬೇಕೆಂದು ಘೋಷಣೆ ಕೂಗುತ್ತಿದ್ದರು)

ವಿಧೇಯಕಗಳನ್ನು ಮಂಡಿಸುವುದು

ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿದೇಯಕ 2014

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.